# ವಿಶ್ವನಂದಿನಿ ಲೇಖನಮಾಲೆ – 81

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ತೊಂಭತ್ತನೆಯ ಪದ್ಯ

ಹೀಗೆ ಪರಮಾತ್ಮನನ್ನು "ಸರ್ವಭೂತೇಷು ಸಮಃ" ಎಂದು ಚಿಂತನೆ ಮಾಡಿ, ಅವನ ಆನಂದಪ್ರದತ್ವವನ್ನು ದೋಷದೂರತ್ವವನ್ನು ಚಿಂತಿಸುತ್ತಾರೆ –

**ಮಗನ ಕೊಂದವನಾಳುವಂತಹ**
**ಸುಗಣೆಯರು ಹದಿನಾರು ಸಾವಿರ**
**ಸೊಗಸುಗಾತಿಯರವರ ಮೋಹದ ಬಲೆಗೆ ವಿಟನಾಗಿ ।**
**ಬಗೆಬಗೆಯ ರತಿಕಲೆಗಳಲಿ ಕೂ-**
**ರುಗರ ನಾಟಿಸಿ ಮೆರೆದು ನೀನೀ**
**ಜಗಕೆ ಪಾವನನಾದೆ ರಕ್ಷಿಸು ನಮ್ಮನನವರತ ॥ ೩೯ ॥**

'ಮಗನ' ವರಾಹರೂಪದಿಂದ ತನ್ನ ಮಗನಾದ ನರಕಾಸುರನನ್ನು
'ಕೊಂದು' ಸಂಹಾರ ಮಾಡಿ
'ಅವನು ಆಳುವಂತಹ' ಅವನ ಸೆರೆಯಲ್ಲಿದ್ದು ತೊಂದರೆ ಅನುಭವಿಸುತ್ತಿದ್ದ

‘ಸುಗುಣೆಯರು’ ರೂಪಾದಿಶ್ರೇಷ್ಠ ಗುಣಗಳನ್ನು ಹೊಂದಿಂದ
‘ಹದಿನಾರು ಸಾವಿರ ಸೊಗಸುಗಾತಿಯರು’
ಕಣ್ಸೆಳೆಯುವ ಸೊಬಗನ್ನು ಉಳ್ಳ ಹದಿನಾರುಸಾವಿರ ಸ್ತ್ರೀಯರು.
‘ಅವರ ಮೋಹದ’ ಆ ಸ್ತ್ರೀಯರ ಪ್ರೀತಿಯ ಕಾಮದ
‘ಬಲೆಗೆ’ ಬಂಧನದಲ್ಲಿ
‘ವಿಟನಾಗಿ’ ಅವರ ಜಾರನಂತಾದ ನೀನು
“ಬಗೆಬಗೆಯ ರತಿಕಲೆಗಳಲಿ’ ಮನುಷ್ಯರಿಗೆ ಊಹಿಸಲೂ ಅಸಾಧ್ಯವಾದ ಆ ಹದಿನಾರುಸಾವಿರ ಸ್ತ್ರೀಯರು ಅನೇಕಜನ್ಮಗಳಿಂದ ಪರಿತಪಿಸುತ್ತಿದ್ದ ಅದ್ಭುತವಾದ ಆನಂದವನ್ನು ಅವರಿಗೆ ಮೈಥುನದಿಂದ ನೀಡಿ ಆ ಮೈಥುನದ ಕಲೆಗಳಲ್ಲಿ
“ಕೂರುಗುರ ನಾಟಿಸಿ’ ನಿನ್ನ ಹರಿತವಾದ ಉಗುರುಗಳ ಗುರುತನ್ನು ಸುರತದ ಉದ್ರಿಕ್ತಾವಸ್ಥೆಯಲ್ಲಿದ್ದವನಾದ ನೀನು ಅವರ ಮೈಯಲ್ಲಿ ಮೂಡಿಸಿ
‘ಮೆರೆದು’ ಆ ಸೊಗಸುಗಾತಿಯರಿಂದ ಸೊಗಸುಗಾರ ಎಂದು ಹೊಗಳಿಸಿಕೊಂಡು ಆನಂದಪಟ್ಟು

'ನೀನು ಈ ಜಗಕೆ ಪಾವನನಾದೆ' ಇಡಿಯ ಜಗತ್ತಿಗೆ ಪವಿತ್ರನಾದೆ.
'ನಮ್ಮನ್ನು ಅನವರತ ರಕ್ಷಿಸು'. ನಾವು ಅನುಭವಿಸಲು ಯೋಗ್ಯವಾದ ಸುಖಗಳನ್ನು ಮೋಕ್ಷದಲ್ಲಿ 'ಅನವರತ' ಅನಂತಕಾಲದವರೆಗೆ ನೀಡಿ ನಮ್ಮನ್ನು ರಕ್ಷಿಸು.

ಪರಮಾತ್ಮ ತನ್ನ ವರಾಹರೂಪದಿಂದ ಭೂಮಿದೇವಿಯಲ್ಲಿ ನರಕಾಸುರನನ್ನು ಮಗನನ್ನಾಗಿ ಪಡೆದಿರುತ್ತಾನೆ. ಆ ನರಕಾಸುರ ದೇವತೆಗಳಿಗೆ ಮುನಿಗಳಿಗೆ ತೊಂದರೆ ನೀಡಿದಾಗ ತಾನೇ ಅವನನ್ನು ಕೊಲ್ಲುತ್ತಾನೆ. ಪರಮಾತ್ಮನನ್ನೇ ಮದುವೆಯಾಗಬೇಕೆಂದು ವ್ರತಾಚರಣೆಯಲ್ಲಿ ತೊಡಗಿದ್ದ ಹದಿನಾರುಸಾವಿರ ಸುಂದರಿಯರನ್ನು ಅವನು ಬಂಧನದಲ್ಲಿರಿಸಿರುತ್ತಾನೆ. ಪರಮಾತ್ಮ ಅವರನ್ನು ಸೆರೆಯಿಂದ ಬಿಡಿಸಿ ತಾನೇ ಮದುವೆಯಾಗುತ್ತಾನೆ.

ಅಷ್ಟ ಮಹಿಷಿಯರನ್ನು ಹೊರತು ಪಡಿಸಿ ಪರಮಾತ್ಮನ ಅಂಗಸಂಗವನ್ನು ಪಡೆದ ಹೆಣ್ಣುಮಕ್ಕಳಲ್ಲಿ ಎರಡು ಬಗೆಯವರಿದ್ದಾರೆ. ಒಂದು

ನರಕನ ಮನೆಯಲ್ಲಿ ಬಂಧನಕ್ಕೊಳಗಾಗಿದ್ದು ಬಳಿಕ ಪರಮಾತ್ಮನಿಂದ ಬಿಡಿಸಲ್ಪಟ್ಟು ಅವನನ್ನು ಮದುವೆಯಾದ ಹದಿನಾರುಸಾವಿರ ಯುವತಿಯರು. ಅವರ ಜತೆಯಲ್ಲಿ ನಡೆದ ಸರಸ ಲೋಕದ ದೃಷ್ಟಿಯಲ್ಲಿ ತಪ್ಪಲ್ಲ. ಕಾರಣ ಅವರೆಲ್ಲರೂ ಶ್ರೀಕೃಷ್ಣನ ಮಡದಿಯರು, ಪರಮಾತ್ಮನ ಮಡದಿಯಾರಗಬೇಕೆಂದೇ ವಾಯುದೇವರಿಂದ ವರವನ್ನು ಪಡೆದು ಹೆಣ್ಣಾಗಿ ಹುಟ್ಟಿಬಂದ ಅಗ್ನಿಪುತ್ರರು. ದ್ವಾರಕೆಯಲ್ಲಿ ವಾಸವಾಗಿದ್ದವರು.

ಎರಡನೆಯದು ಗೋಕುಲದ ಗೋಪಿಕಾಸ್ತ್ರೀಯರು. ಇವರಲ್ಲಿ ಕೆಲವರು ಮಾತ್ರ ಪರಮಾತ್ಮನನ್ನು ಮದುವೆಯಾದವರು. ಕೆಲವರು ಪರಮಾತ್ಮನ ಮಡದಿಯರಲ್ಲ. “ಅನ್ಯೈಃ ಧೃತಾಃ” ಆದರೆ ಬೇರೊಬ್ಬರ ಮಡದಿಯರಾಗಿದ್ದರೂ ಪರಮಾತ್ಮನ ಅಂಗಸಂಗವನ್ನು ಬಯಸಿದವರು. ಪೂರ್ವಜನ್ಮದಲ್ಲಿ ಅಪ್ಸರಸೆಯರಾದವರು. ಪರಮಾತ್ಮ ಇವರಿಗೆ ಜಾರನಾಗಿ ಸುಖವನ್ನು ನೀಡಿದ. ಲೋಕದ ದೃಷ್ಟಿಯಲ್ಲಿ ಇದು ತಪ್ಪು.

ಆದರೆ, ಪರಮಾತ್ಮ ಯಾವ ವಿ ನಿಷೇಧಗಳಿಗೆ ಒಳಪಡದ ಸ್ವತಂತ್ರನಾದ್ದರಿಂದ ಅವನಿಗೆ ಪಾಪವೂ ಇಲ್ಲ, ಅಮಂಗಳವೂ ಇಲ್ಲ. ಈ ಗೋಪಿಕಾಸ್ತ್ರೀಯರೂ ಅನಾವೃತರಾದ (ವಿವರವನ್ನು ಐದನೆಯ ಪದ್ಯದ ಗೋಪೀಜಾರ ಎಂಬಲ್ಲಿ ನೀಡಲಾಗಿದೆ) ಅಪ್ಸರಃಸ್ತ್ರೀಯರಾದ್ದರಿಂದ ಅವರಿಗೂ ಪರಪುರುಷಸಂಪರ್ಕದ ಪಾಪವಿಲ್ಲ. ಹೀಗಾಗಿ ಪರಮಾತ್ಮ ಗೋಪಿಕಾಸ್ತ್ರೀಯರ ಸಂಪರ್ಕದ ವಿಷಯದಲ್ಲಿ ಸರ್ವಾತ್ಮನಾ ಜಗಕೆ ಪಾವನನಾದವನು. ಸಂಶಯವಿಲ್ಲ.

ಆದರೂ, ಪಾಪದ ಪ್ರಸಕ್ತಿಯೇ ಇಲ್ಲದ ಹದಿನಾರುಸಾವಿರ ರಾಜಪುತ್ರಿಯರ ವಿಷಯದಲ್ಲಿ ದಾಸರು ಪರಮಾತ್ಮನನ್ನು ಜಗಕೆ ಪಾವನನಾದೆ ಎಂದು ಕರೆಯಲು ಮಹತ್ತ್ವದ ಕಾರಣವಿದೆ. ಅದು, ಅತಿಯಾದ ಭೋಗವನ್ನು ಅದರಲ್ಲಿಯೂ ಅತಿಯಾಗಿ ಸ್ತ್ರೀಸುಖವನ್ನು ಅನುಭವಿಸುವವನ್ನು ಶಾಸ್ತ್ರ ನಿಂದಿಸುತ್ತದೆ. ಅವನ ಸಂಪರ್ಕವನ್ನು ತೊರೆಯಬೇಕು ಎಂದು ಹೇಳುತ್ತದೆ. ಆದರೆ, ಪರಮಾತ್ಮ ಹದಿನಾರುಸಾವಿರ ಜನರನ್ನು ಮದುವೆಯಾದರೂ ಅವರ ಜತೆಯಲ್ಲಿ ಅವರಿಗೆ

ಮಾತ್ರ ಗೋಚರನಾಗುತ್ತಾ ಇದ್ದು ಅವರಿಗೆ ಪೂರ್ಣಸುಖವನ್ನು ನೀಡುತ್ತಾ ಸದಾ ಸ್ತ್ರೀಸುಖದಲ್ಲಿ ಮತ್ತು ಒಬ್ಬೊಬ್ಬರಲ್ಲಿ ಹತ್ತು ಜನ ಗಂಡುಮಕ್ಕಳು, ಒಬ್ಬಳು ಹೆಣ್ಣು ಮಗಳನ್ನು ಪಡೆದು ಅವರ ಪೋಷಣೆಯ ಕೃತ್ಯದಲ್ಲಿ ಸಾಂಸಾರಿಕ ಕೃತ್ಯದಲ್ಲಿ ಆಸಕ್ತನಾಗಿದ್ದರೂ ಪರಮಾತ್ಮ ಜಗಕೆ ಪಾವನ. ಕಾರಣ, ಅವನು ಅಸಂಗ ಮತ್ತು ಸ್ವತಂತ್ರ. ವಿಧಿನಿಷೇಧಗಳೆಲ್ಲವೂ ಜೀವರಿಗೆ, ಶ್ರೀಕೃಷ್ಣನಿಗಲ್ಲ. ಅವನು ಕೆಲವು ಬಾರಿ ವಿಧಿನಿಷೇಧಗಳನ್ನು ಅನುಸರಿಸಲು ಕಾರಣ, ಅವನನ್ನು ಅನುಕರಿಸಿ ಜೀವರು ಸತ್ಕರ್ಮಾಸಕ್ತರಾಗಲಿ ಎಂದಷ್ಟೇ. ತಾನು ವಿನಿಷೇಧಾತೀತ ಎನ್ನುವದನ್ನು ಪರಮಾತ್ಮ ಈ ಪ್ರಸಂಗದಿಂದ ಜಗತ್ತಿಗೆ ತೋರಿಸಿ ತಾನು ಪರಮ ಪವಿತ್ರ ಯಾವ ಪಾಪಗಳೂ ಇಲ್ಲದವನು ಎಂದು ಸಾರಿದ ॥ ೩೯ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ